**ದಿನಾಂಕಃ 02.06.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 1 ರಿಂದ 5ನೇ ಪ್ರತಿವಾದಿಗಳ ಪರ ವಕೀಲರಿಂದ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಪ್ರತಿವಾದಿಗಳು ಈ ಕೇಸಿನಲ್ಲಿ ಏನು ತಕರಾರು ಹಾಕಿದ್ದಾರೆಂದು ತಿಳಿದುಕೊಂಡಿಲ್ಲ. ನಾನು ನನ್ನ ತಾಯಿ ಮತ್ತು 2ನೇ ವಾದಿ ಹೊಸಹಳ್ಳಿಯಲ್ಲಿ ವಾಸವಿದ್ದೆವು. ಹೊಸಹಳ್ಳಿಯಲ್ಲಿ ವಾಸವಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ವಿದ್ಯಾಭ್ಯಾಸ ಮಂಡ್ಯದಲ್ಲಿ ಆಗಿರುತ್ತದೆ. 2ನೇ ವಾದಿ ವಿದ್ಯಾಭ್ಯಾಸ ಮಾಡಿಲ್ಲ. 1 ರಿಂದ 5ನೇ ಪ್ರತಿವಾದಿಗಳು ಮೃತ ತಮ್ಮಯ್ಯರವರಿಗೆ ಏನಾಗಬೇಕೆಂದು ನನಗೆ ಗೊತ್ತಿರುವುದಿಲ್ಲ. ಭಾಗ ಕೇಳಿ ಈ ದಾವೆ ಸಲ್ಲಿಸಿದ್ದೇನೆ. ನಮ್ಮ ಕುಟುಂಬಕ್ಕೂ ಪ್ರತಿವಾದಿಗಳಿಗೂ ಏನು ಸಂಬಂಧ ಎಂದು ಗೊತ್ತಿರುವುದಿಲ್ಲ. 1ನೇ ಪ್ರತಿವಾದಿಯ ಗಂಡ ನನ್ನ ತಂದೆಯಾಗಬೇಕು. ಈ ಹಿಂದೆ ನಾನಾಗಲೀ ನಮ್ಮ ಮನೆಯವರಾಗಲೀ 1ನೇ ಪ್ರತಿವಾದಿಯ ಗಂಡನ ಮೇಲೆ ಯಾವುದೇ ಕೇಸು ಹಾಕಿರುವುದಿಲ್ಲ. ಈ ದಾವೆ ಸಲ್ಲಿಸಲು ನಾನು ವಕೀಲರಲ್ಲಿ ಮಾಹಿತಿ ನೀಡಿರುತ್ತೇನೆ. ದಾವಾ ಸ್ವತ್ತಿನ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಪ್ರತಿವಾದಿಗಳು ತಮ್ಮಯ್ಯನ ಜೊತೆ ಕೆ.ಎಂ. ದೊಡ್ಡಿಯಲ್ಲಿ ವಾಸ ಮಾಡುತ್ತಿದ್ದರು, ಎಷ್ಟು ವರ್ಷದಿಂದ ವಾಸವಾಗಿದ್ದರು ಎಂದು ನನಗೆ ಅಂದಾಜು ಹೇಳಲಾಗುವುದಿಲ್ಲ. ಪ್ರತಿವಾದಿಗಳು ತಮ್ಮಯ್ಯನ ಜೊತೆ ಕೆ.ಎಂ. ದೊಡ್ಡಿಯ ಮೆಲ್ಲಹಳ್ಳಿಯಲ್ಲಿ ವಾಸ ಮಾಡುತ್ತಿದ್ದರು. ಸದರಿ ಮನೆಯನ್ನು ನಾನು ನೋಡಿರುತ್ತೇನೆ.

ಶೆಡ್ಯೂಲ್ ಎ ಆಸ್ತಿಯನ್ನು ನನ್ನ ತಂದೆ ಖರೀದಿಸಿದ್ದರು. 1ನೇ ಪ್ರತಿವಾದಿಯ ಗಂಡ ಕೆಇಬಿಯಲ್ಲಿ ಕೆಲಸ ಮಾಡುತ್ತಿದ್ದರು, ಅವರು ಕೆಲಸಕ್ಕೆ ಯಾವಾಗ ಸೇರಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಅವರು ಯಾವಾಗ ನಿವೃತ್ತಿಯಾದರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ತಮ್ಮಯ್ಯ ಮತ್ತು ನನ್ನ ತಾಯಿಯ ನಡುವೆ ಯಾವತ್ತೂ ಭಿನ್ನಾಭಿಪ್ರಾಯ ಇರಲಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತಿನ ಮೂಲ ಕ್ರಯ ಪತ್ರ ನನ್ನ ಬಳಿ ಇರುವುದಿಲ್ಲ. ಬಿ ಶೆಡ್ಯೂಲ್ ಆಸ್ತಿ ನಮ್ಮ ತಂದೆಗೆ ಸೇರಿರುತ್ತದೆ ಅದು 37 ಗುಂಟೆ ಇರುತ್ತದೆ. ಸದರಿ ಬಿ ಶೆಡ್ಯೂಲ್ ಆಸ್ತಿ ಪ್ರಸ್ತುತ ನಮ್ಮ ತಂದೆಯ ಹೆಸರಿನಲ್ಲಿದೆ. ಕೇಸು ಹಾಕಿದ ನಂತರ ಬಿ ಶೆಡ್ಯೂಲ್ ಸ್ವತ್ತನ್ನು ನಾನು ಮತ್ತು ನನ್ನ ಚಿಕ್ಕಪ್ಪ ಭಾಗ ಮಾಡಿಕೊಂಡಿದ್ದೇವೆ. ಸಾಕ್ಷಿಗೆ ಎಂ ಆರ್ ತೋರಿಸಿದ್ದು ಅದರ ಪ್ರಕಾರ 1ನೇ ವಾದಿಯಿಂದ ನನಗೆ ಮತ್ತು ಚಿಕ್ಕಪ್ಪಂದಿರ ಹೆಸರಿಗೆ ಬಿ ಶೆಡ್ಯೂಲ್ ಸ್ವತ್ತು ವರ್ಗಾವಣೆಯಾದ ಬಗ್ಗೆ ಒಪ್ಪಿಕೊಂಡಿದ್ದು ಅದನ್ನು ನಿಡಿ–1 ಎಂದು ಗುರುತಿಸಲಾಯಿತು. ನೋಂದಾಯಿತ ವಿಭಾಗ ಪತ್ರದ ಮೂಲಕ ನಿಡಿ–1 ರಂತೆ ಖಾತೆ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿ. ನೋಂದಾಯಿತ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ.

ನಮ್ಮ ತಂದೆಯ ತಂದಗೆ ಒಟ್ಟು ಆರು ಜನ ಮಕ್ಕಳು ಅವರಲ್ಲಿ ಮೂರು ಗಂಡು ಮಕ್ಕಳು ಮತ್ತು ಮೂರು ಹೆಣ್ಣು ಮಕ್ಕಳು ಇರುತ್ತಾರೆ. ಇಬ್ಬರು ಹೆಣ್ಣುಮಕ್ಕಳ ಹೆಸರು ನನಗೆ ಗೊತ್ತಿರುವುದಿಲ್ಲ ಇನ್ನೊಬ್ಬ ಹೆಣ್ಣು ಮಗಳ ಹೆಸರು ರವಿ ಇರುತ್ತದೆ. ನನ್ನ ತಂದೆ ಮತ್ತು ಅವರ ಸಹೋದರ ಮತ್ತು ಸಹೋದರಿಯರ ಮಧ್ಯೆ ಶೆಡ್ಯೂಲ್ ಬಿ ಆಸ್ತಿ ಭಾಗವಾಗಿರುವುದಿಲ್ಲ. ನನ್ನ ತಂದೆಯ ಸಹೋದರ ಮತ್ತು ಸಹೋದರಿಯರನ್ನು ಈ ಕೇಸಿನಲ್ಲಿ ಪಕ್ಷಕಾರರನ್ನಾಗಿ ಮಾಡಲು ತೊಂದರೆ ಇರುವುದಿಲ್ಲ. ವಿಭಾಗ ಪತ್ರ ಮಾಡುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ಬಂದು ಭಾಗಿಯಾಗಿ ಎಂದು ಕೇಳಿರುವುದಿಲ್ಲ. ಬಿ ಶೆಡ್ಯೂಲ್ ಸ್ವತ್ತಿಗೆ ನನ್ನ ಹೆಸರಿನಲ್ಲಿ 12.08 ಗುಂಟೆಗೆ ಆರ್ ಟಿ ಸಿ ಬರುತ್ತಿದೆ ಎಂದರೆ ಸರಿ. ಅದೇ ರೀತಿ ನಾಗ ಮತ್ತು ಮಹೇಶ್ ರವರ ಹೆಸರಿಗೆ ಬಿ ಶಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ 12 ಗುಂಟೆಗೆ ಆರ್ ಟಿ

ಸಿ ಬರುತ್ತಿದೆ ಎಂದರೆ ಸರಿ. ಆ ಬಗ್ಗೆ ಮೂರು ಆರ್ ಟಿ ಸಿ ಗಳನ್ನು ಸಾಕ್ಷಿಯು ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಡಿ–2 ರಿಂದ ನಿಡಿ–4 ಎಂದು ಗುರುತಿಸಲಾಯಿತು. ಬಿ ಶೆಡ್ಯೂಲ್ ಆಸ್ತಿ 1ನೇ ಪ್ರತಿವಾದಿಯ ಗಂಡ ತಮ್ಮಯ್ಯ ಬಿನ್ ಮಾದಯ್ಯನ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ಸರಿ. ಪಹಣಿಯನ್ನು ನಿಡಿ–5 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರ ತಾಯಿಯ ಹೆಸರು ಪುಟ್ಟಬಸಮ್ಮ. ಪುಟ್ಟಬಸಮ್ಮರವರ ಹೆಸರಿಗೆ ಇರುವ ಪಹಣಿಯನ್ನು ಸಾಕ್ಷಿಯು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ–6 ಎಂದು ಗುರುತಿಸಲಾಯಿತು. ಕೇಸು ಹಾಕುವ ಪೂರ್ವದಲ್ಲಿ ಅನುರಾಧಮ್ಮ ರವರ ಗಂಡ ತಮ್ಮಯ್ಯ ಆತನ ಹೆಂಡತಿಗೆ ವಿಲ್ ನಾಮೆ ಮಾಡಿರುವ ವಿಚಾರ ಗೊತ್ತಾಗಿರುತ್ತದೆ. ಸದರಿ ವಿಲ್ ನಾಮೆಯನ್ನು ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರ ಪೋಟೊ ಮತ್ತು ಸಹಿಯನ್ನು ನೋಡಿದರೆ ಗುರುತಿಸುತ್ತೇನೆ.

ಡಿ ಶೆಡ್ಯೂಲ್ ಸ್ವತ್ತನ್ನು ನನ್ನ ತಂದೆ ಕೆಂಪಯ್ಯರವರಿಂದ ಖರೀದಿ ಮಾಡಿರುತ್ತಾರೆ. ನಾನು ಕ್ರಯ ಪತ್ರ ನೋಡಿರುವುದಿಲ್ಲ. ಈ ವಿಚಾರವನ್ನು ಪಂಚಾಯಿತಿಯಲ್ಲಿ ವಿಚಾರ ಮಾಡಿದಾಗ ಗೊತ್ತಾಗಿರುತ್ತದೆ. ಮೆಲ್ಲಹಳ್ಳಿಯಲ್ಲಿರುವ ಮನೆ ನನ್ನ ತಂದೆಯ ಹೆಸರಿನಲ್ಲಿತ್ತು. ಆ ಬಗ್ಗೆ ಅಸೆಸ್ ಮೆಂಟ್ ಪ್ರತಿಯನ್ನು ನೋಡಿದ್ದೇನೆ. ಡಿ ಶೆಡ್ಯೂಲ್ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿದ್ದ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ಅದರ ಅಸೆಸ್ ಮೆಂಟ್ ನಂ. 880 ಇರುತ್ತದೆ. ಸಾಕ್ಷಿಗೆ ಟ್ಯಾಕ್ಸ್ ಡಿಮ್ಯಾಂಡ್ ಎಕ್ಸ್ ಟ್ರ್ಯಾಕ್ಟ್ ತೋರಿಸಿದ್ದು ಅದರ ಪ್ರಕಾರ ಅಸೆಸ್ ಮೆಂಟ್ ನಂ. 880, 1ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಡಿ ಶೆಡ್ಯೂಲ್ ಆಸ್ತಿ ರಂಗಯ್ಯರವರಿಂದ 1ನೇ ಪ್ರತಿವಾದಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ರಂಗಯ್ಯ ಮತ್ತು 1ನೇ ಪ್ರತಿವಾದಿಗೆ ಏನು ಸಂಬಂಧ ಇದೆ ಎಂದು ನನಗೆ ಗೊತ್ತಿಲ್ಲ. ಡಿ ಶೆಡ್ಯೂಲ್ ಆಸ್ತಿ 1ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದರೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೆಲ್ಲಹಳ್ಳಿ ಮನೆಯ ಕಂದಾಯ ಮತ್ತು ಕರೆಂಟ್ ಬಿಲ್ಲುಗಳನ್ನು 1ನೇ ಪ್ರತಿವಾದಿ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೆಲ್ಲಹಳ್ಳಿ ಮನೆಯ ಕಂದಾಯ ಯಾರು ಕಟ್ಟುತ್ತಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಕಟ್ಟುತ್ತಿದ್ದರು ಎಂದು ಉತ್ತರಿಸುತ್ತಾರೆ. ನನ್ನ ತಂದೆ ಕಟ್ಟುತ್ತಿದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಕಂದಾಯ ಕಟ್ಟುತ್ತಿದ್ದರು ಎಂದು ತೋರಿಸುವ ಬಗ್ಗೆ ಯಾವುದೇ ದಾಖಲೆ ನೋಡಿರುವುದಿಲ್ಲ. ಮೆಲ್ಲಹಳ್ಳಿ ಮನೆಯು 1ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ಏನು ಕೆಲಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಅವರು ಏನು ಸಂಪಾದನೆ ಮಾಡುತ್ತಾರೆ ಮತ್ತು ಏನು ಆದಾಯ ಇದೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಖಾಸಗಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದು ಸದರಿ ಆದಾಯದಿಂದ ಮತ್ತು ಆಕೆಯ ತವರು ಮನೆಯ ಸಹಾಯದಿಂದ ಡಿ ಶೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾನು ಗೊರವಲೆ ಗ್ರಾಮದಲ್ಲಿ ಭತ್ತ ಹಾಕುತ್ತೇನೆ. 1ನೇ ಪ್ರತಿವಾದಿಯ ಗಂಡ ಗೊರವಲೆಯಲ್ಲಿ ಯಾವತ್ತೂ ಮತದಾನ ಮಾಡಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ಗೊರವಲೆಯಲ್ಲಿ ಮತದಾನ ಮಾಡಿದ ಬಗ್ಗೆ ದಾಖಲೆ ನೋಡಿದ್ದೇನೆ. ಸಾಕ್ಷಿಯು ಮತ್ತೆ ಹೇಳುತ್ತಾರೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ ಎಂದು. 1ನೇ ಪ್ರತಿವಾದಿಯ ಗಂಡ ಹೊಸಹಳ್ಳಿಯಲ್ಲಿ ವಾಸವಿದ್ದರು ಎಂದರೆ ಸರಿ. ಪುಟ್ಟಬಸಮ್ಮನ ಮಗ ತಮ್ಮಯ್ಯನಿಗೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ಮಡಿಕೇರಿ, ಕೆ.ಎಂ. ದೊಡ್ಡಿ ಮತ್ತು ಹಲಗೂರಿನಲ್ಲಿ ಕೆಲಸ ಮಾಡಿದ್ದಾರೆ. ಪುಟ್ಟಬಸಮ್ಮನ ಮಗ ತಮ್ಮಯ್ಯ 19.03.1985 ರಿಂದ ಸರ್ಕಾರಿ

ಕೆಲಸದಲ್ಲಿದ್ದರು ಎಂದರೆ ಸರಿ. ಪುಟ್ಟಬಸಮ್ಮನ ಮಗ ತಮ್ಮಯ್ಯ ಎಲ್ಲೆಲ್ಲಿ ಕೆಲಸ ಮಾಡಿದ್ದನೋ ಅಲ್ಲಲ್ಲಿ ಅನುರಾಧಮ್ಮ ಮತ್ತು ಅವರ ಮಕ್ಕಳು ಅವರ ಜೊತೆಯಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುಟ್ಟಬಸಮ್ಮನ ಮಗ ತಮ್ಮಯ್ಯ ಆಸ್ತಿ ಖರೀದಿ ಮಾಡಿದ ಬಗ್ಗೆ ಮೂಲ ದಾಖಲಾತಿಗಳು ನನ್ನ ಬಳಿ ಇರುವುದಿಲ್ಲ.

ದಾವಾ ಎ ಶೆಡ್ಯೂಲ್ ಆಸ್ತಿಯನ್ನು ತಮ್ಮಯ್ಯರವರು ಸ್ವಂತ ಸಂಪಾದನೆಯಿಂದ ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. ಸಾಕ್ಷಿಯು ಅದು ಪಿತ್ರಾರ್ಜಿತ ಸ್ವತ್ತು ಎಂದು ಉತ್ತರಿಸುತ್ತಾರೆ. ದಾವಾ ಎ ಶೆಡ್ಯೂಲ್ ಸ್ವತ್ತು ತಮ್ಮಯ್ಯನವರಿಗೆ ಬರುವ ಪೂರ್ವದಲ್ಲಿ ಮಾರಯ್ಯ ಅಃ ಮರಯ್ಯರವರ ಹೆಸರಿನಲ್ಲಿತ್ತು. ಸದರಿ ಸ್ವತ್ತು ಮಾರಯ್ಯರವರ ಹೆಸರಿನಲ್ಲಿದ್ದ ಬಗ್ಗೆ ದಾಖಲೆ ನೋಡಿರುವುದಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತನ್ನು ತಮ್ಮಯ್ಯನವರು 1984 ರಲ್ಲಿ ಖರೀದಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತಿನ ಖಾತೆಯು ಈಗ ತಮ್ಮಯ್ಯನವರ ಹೆಸರಿನಲ್ಲಿರುತ್ತದೆ. ದಾವಾ ಎ ಶೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿಯನ್ನು ನನಗೆ ಹೇಳಲಾಗುವುದಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತು 1ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಎ ಶೆಡ್ಯೂಲ್ ಆಸ್ತಿ ಇದ್ದರೂ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಮ್ಮಯ್ಯನವರು ತಮ್ಮ ಸ್ವಂತ ಸಂಪಾದನೆಯಿಂದ ದಾವಾ ಎ ಶೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸಿ ಶೆಡ್ಯೂಲ್ ಸ್ವತ್ತು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸಿ ಶೆಡ್ಯೂಲ್ ಸ್ವತ್ತು 1ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ದಾವಾ ಸಿ ಶೆಡ್ಯೂಲ್ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿರುವ ವಿಚಾರ ಗೊತ್ತಿದ್ದರುಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸಿ ಶೆಡ್ಯೂಲ್ ಆಸ್ತಿಯನ್ನು 1ನೇ ಪ್ರತಿವಾದಿಯ ಗಂಡ 2006 ರಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯನ್ನು ಪಾಂಡುರಂಗ ದೇವರಾಜುರವರಿಂದ ಖರೀದಿ ಮಾಡಿರುತ್ತಾರೆ. ದಾವಾ ಸಿ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ತಮ್ಮಯ್ಯರವರು ಸರ್ಕಾರಿ ಉದ್ಯೋಗದಲ್ಲಿದ್ದರು ಎಂದರೆ ಸರಿ. ಅವರು ಸಂಪಾದನೆ ಮಾಡಿದ ಹಣವನ್ನು ಸದರಿ ಸ್ವತ್ತು ಖರೀದಿ ಮಾಡಲು ಉಪಯೋಗಿಸಿದ್ದರು ಎಂದರೆ ಸರಿಯಲ್ಲ. ನಾವು ತಮ್ಮಯ್ಯರವರ ಜೊತೆ ಒಟ್ಟು ಕುಟುಂಬದಲ್ಲಿ ವಾಸವಿದ್ದ ಬಗ್ಗೆ ಪಡಿತರ ಚೀಟಿಯನ್ನು ಹಾಕಿದ್ದೇನೆ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.